**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

**ಸ್ಪೆಷಲ್ ಕೇಸ್ ನಂಃ 78/2022** ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

| | |
|---|---|
| ಸಾಕ್ಷಿದಾರರ ಹೆಸರು | ಸಂದೇಶ್ |
| ತಂದೆಯ ಹೆಸರು | ಕುಶಲ |
| ವಯಸ್ಸು | 26 ವರ್ಷ |
| ಉದ್ಯೋಗ | ಪೈಂಟಿಂಗ್ |
| ವಿಳಾಸ | ಆರೂರು, ಬಂಗ್ಲೆಗುಡ್ಡೆ, ಬ್ರಹ್ಮಾವರ ತಾಲೂಕು |

ದಿನಾಂಕಃ 10-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ-2 ರಿಂದ 5 ಗೊತ್ತು. ಚಾಸಾ-3 ನನ್ನ ಅಣ್ಣ. ನಾನು ಆದಿ ದ್ರಾವಿಡ ಜನಾಂಗಕ್ಕೆ ಸೇರಿದ್ದೇನೆ. ಅದು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಅವರು ಬೇರೆ ಜಾತಿಯವರು. ಅವರಿಗೆ ನನ್ನ ಜನಾಂಗದ ಬಗ್ಗೆ ಗೊತ್ತು. ನಾನು, ಚಾಸಾ-2 ಮತ್ತು 3 ಪೈಂಟಿಂಗ್ ಕೆಲಸಕ್ಕೆ ಹೋಗುತ್ತೇವೆ.

2) ತಾರೀಕು 14-05-2022 ರಂದು ನಾನು, ಚಾಸಾ-2 ಮತ್ತು 3 ಬಾರ್ಕೂರಿಗೆ ಪೈಂಟಿಂಗ್ ಕೆಲಸಕ್ಕೆ ಹೋಗಿದ್ದೆವು. ಆಗ ಅಲ್ಲಿ ಇದ್ದ ಜಾತ್ರೆಗೆ ಚಾಸಾ-2 ನಮ್ಮನ್ನು ಕರೆದಿದ್ದರು, ಅದು ಅವರ ಊರಿನ ಜಾತ್ರೆ. ಆದಿನ ನಾವು ರಾತ್ರಿ ಸುಮಾರು 9.30 ಗಂಟೆಯ ಸಮಯಕ್ಕೆ ಹೋಗಿದ್ದೆವು. ಅದು ಕೆಂಜೂರು ವೀರೇಶ್ವರ ಜಾತ್ರೆ. ಜಾತ್ರೆಯಲ್ಲಿ ಓಡಾಡಿ, ರಾತ್ರಿ 11.30 ಗಂಟೆಯ ಸಮಯಕ್ಕೆ ದೇವಸ್ಥಾನದ ಬಳಿ ಗದ್ದೆಯಲ್ಲಿ ಐಸ್ ಕ್ರೀಮ್ ತಿನ್ನುತ್ತಿದ್ದೆವು. ಆಗ 1 ನೇ ಆರೋಪಿ, ಚಾಸಾ-2 ಇವರಿಗೆ ತಾಗಿಕೊಂಡು ಹೋದರು, ಅದಕ್ಕಾಗಿ ಚಾಸಾ-2, ಜಾತ್ರೆಯಲ್ಲಿ ಏಕೆ ಹಾಗೆ

ತಾಗಿಕೊಂಡು ಹೋಗುವುದು ಎಂದು ಹೇಳಿದ್ದರು, ಆಗ 1 ನೇ ಆರೋಪಿತನೊಂದಿಗೆ ಇನ್ನೂ 4 -5 ಜನರು ಇದ್ದರು. ಅವರ ಹೆಸರು ಗೊತ್ತಿಲ್ಲ, ಅವರನ್ನು ನೋಡಿದರೆ ಗುರುತಿಸಬಲ್ಲೆ. ಈಗ ನ್ಯಾಯಾಲಯದಲ್ಲಿರುವ ಆರೋಪಿತರು ಅಲ್ಲದೆ, ಇನ್ನು ಇಬ್ಬರು ಇದ್ದರು, ಅವರನ್ನು ಗುರುತಿಸವಲ್ಲಿ ತಕರಾರು ಇಲ್ಲ. ಆಗ 1 ನೇ ಆರೋಪಿತ ಮತ್ತು ಆತನೊಂದಿಗೆ ಇದ್ದ ಎಲ್ಲರೂ ನಮಗೆ ಹಲ್ಲೆ ಮಾಡಲು ಬಂದಿದ್ದರು. ಆಗ ನಾನು ಪರಿಶಿಷ್ಟರು ಎಂದು ನಮ್ಮೊಂದಿಗೆ ತಂಟೆ ಮಾಡಬಾರದೆಂದು ಹೇಳಿದ್ದೆವು, ಆಗ ನೀವು ಕೂಸಾಳು ಏನು ಮಾಡುತ್ತೀರಿ ಎಂದು 1 ನೇ ಆರೋಪಿ ಹೇಳಿದ್ದ, ನಿನ್ನ ಜನ ಇದ್ದರೆ ತರಿಸು, ನೀನು ಏನು ಸಾಂಟಾ ಹರಿತ್ತೀಯಾ ಎಂದು ಬೈದರು, ನನ್ನ ಜುಟ್ಟನ್ನು ಹಿಡಿದು ಎಳೆದರು, ಆರೋಪಿತರೆಲ್ಲರೂ ಸೇರಿ ನನಗೆ ಕೈಗಳಿಂದ ಹಲ್ಲೆ ಮಾಡಿದ್ದರು, ನೆಲಕ್ಕೆ ಹಾಕಿ ಒದ್ದಿದ್ದರು. ಆಗ ಚಾಸಾ-2 ಮತ್ತು 3 ಇವರಿಗೂ ಸಹ ಆರೋಪಿತರು ಹೊಡೆದಿದ್ದರು.

3) ಆರೋಪಿತರ ಹಲ್ಲೆಯಿಂದ ನನ್ನ ಬಲಕಣ್ಣು, ಎಡಭುಜಕ್ಕೆ ಪೆಟ್ಟಾಗಿತ್ತು. ಮೈಯಲ್ಲಿ ಸಣ್ಣ ಪುಟ್ಟ ಗಾಯಗಳು ಆಗಿತ್ತು. ಆ ಸಮಯದಲ್ಲಿ ಆ ಜಾಗೆಯ ಕಮಿಟಿಯವರು ಅಲ್ಲಿಗೆ ಬಂದಿದ್ದರು. ಆಗ ಆರೋಪಿತರು ಅಲ್ಲಿಂದ ಹೋಗಿದ್ದರು. ನನ್ನನ್ನು ಚಾಸಾ-2 ಮತ್ತು 3 ಅಟೋದಲ್ಲಿ ಮನೆಗೆ ಕರೆದುಕೊಂಡು ಹೋಗಿದ್ದರು, ನಂತರ ಅಂಬ್ಯುಲೆನ್ಸನಲ್ಲಿ ಅಜ್ಜರಕಾಡು ಆಸ್ಪತ್ರೆಗೆ ಉಪಚಾರಕ್ಕೆ ಸೇರಿಸಿದ್ದರು.

4) ಮಾರನೇ ದಿನ ಅಲ್ಲಿಗೆ ಬಂದಿದ್ದ ಪೊಲೀಸರು ನನ್ನನ್ನು ವಿಚಾರಿಸಿದ್ದರು, ಆಗ ನಾನು ಹೇಳಿದಂತೆ ಚಾಸಾ-3 ಬರೆದಿದ್ಧ, ನಾನು ಅದಕ್ಕೆ ಸಹಿ ಮಾಡಿದ್ದೆ. ನನಗೆ ಈಗ ತೋರಿಸಿದ ದೂರನ್ನೇ ಆದಿನ ಚಾಸಾ-3 ಬರೆದಿದ್ದ. ಅದನ್ನು **ನಿಶಾನೆ ಪಿ-1** ಎಂದು, ಅದರಲ್ಲಿರುವ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಿದ್ದೇನೆ. ನಾನು 4 ದಿನಗಳ ಕಾಲ ಒಳರೋಗಿಯಾಗಿ ಉಪಚಾರ ಪಡೆದಿದ್ದೆ.

5) ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ತಾರೀಕು 21-05-2022 ರಂದು 6 ಜನ ಆರೋಪಿತರನ್ನು ತೋರಿಸಿದ್ದರು. ಅವರನ್ನು ಗುರುತಿಸಿ ಹೇಳಿಕೆ ಕೊಟ್ಟಿದ್ದೆ. ಅವರನ್ನು ಈದಿನ ನೋಡಿ ಗುರುತಿಸಿದ್ದೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್. ಎಸ್.ಎನ್. ವಕೀಲರಿಂದ**

1) ಚಾಸಾ-2 ನಮ್ಮ ಕೆಲಸದ ಮೇಸ್ತ್ರಿ. ಚಾಸಾ-2 ಈತನೊಂದಿಗೆ ನಾವು 6 ಜನ ಕೆಲಸ ಮಾಡಿಕೊಂಡಿದ್ದೇವೆ. ಚಾಸಾ-2, ನಮ್ಮನ್ನು ಮಾತ್ರವೇ ಕರೆದಿದ್ದರು, ಬೇರೆಯವರನ್ನು ಕರೆದಿರಲಿಲ್ಲ. ನಮ್ಮ ಮನೆ ಬ್ರಹ್ಮಾವರದ ಆರೂರಿನಲ್ಲಿದೆ. ನಮ್ಮ ಮನೆಯಿಂದ ದೇವಸ್ಥಾನ ಸುಮಾರು 6 ಕಿ.ಮೀಗಳ ಅಂತರ. ಆದಿನ ನಾವು ಮನೆಯನ್ನು ಬಿಟ್ಟಾಗ ಸುಮಾರು 8.30 ಗಂಟೆಯ ಸಮಯ. ದೇವಸ್ಥಾನದ ಬಳಿ ಬಂದಾಗ ಸುಮಾರು 9.30 ಗಂಟೆಯ ಸಮಯ. ಆದಿನ ನಾವು ಸುಮಾರು ಎರಡುವರೆ - ಮೂರು ಗಂಟೆಯ ಸಮಯ ದೇವಸ್ಥಾನದ ಒಳಗೆ ಇದ್ದೆವು. ಆ ದೇವಸ್ಥಾನದಲ್ಲಿ ಕೆಂಡ ಸೇವೆ ರಾತ್ರಿ 7.00 ರಿಂದ 10.00 ಗಂಟೆಯವರೆಗೆ. ದೇವಸ್ಥಾನದ ಸುತ್ತಮುತ್ತಲೂ ಗದ್ದೆಗಳು ಇವೆ, ಆ ಗದ್ದೆಗಳಲ್ಲಿ ಅನೇಕ ಅಂಗಡಿಗಳನ್ನು ಹಾಕಿದ್ದರು. ಆದಿನ ಜಾತ್ರೆಯಲ್ಲಿ ಅನೇಕ ಜನರು ಸೇರಿದ್ದರು. ಜಾತ್ರೆಯಲ್ಲಿ ಜನ ಸೇರಿದಾಗ, ನೂಕಾಟ ಸಾಮಾನ್ಯ.

2) ಗಲಾಟೆಯಾದ ಜಾಗೆ ದೇವಸ್ಥಾನದಿಂದ ಸುಮಾರು ಕಾಲು ಕಿ.ಮೀ ಗಳ ಅಂತರ. ಆದಿನ ಗಲಾಟೆ ಸುಮಾರು 11.30 ರಿಂದ 12.00 ಗಂಟೆಯವರೆಗೆ ಆಗಿದೆ. ಜಾತ್ರೆಯ ಸಮಯದಲ್ಲಿ ದೇವಸ್ಥಾನದ ಬಳಿ ಮತ್ತು ಸ್ವಯಂ ಸೇವಕರು ಸಹ ಇರುತ್ತಾರೆ ಎಂದರೆ ನಿಜ. ಗಲಾಟೆಯಾದ ಜಾಗೆಯಲ್ಲಿಯೂ ಸಹ ದೇವಸ್ಥಾನದ ಸ್ವಯಂ ಸೇವಕರು, ಪೊಲೀಸರು ಇದ್ದರು ಎಂದರೆ, ಅವರು ಅಲ್ಲಿ ಇರಲಿಲ್ಲ. ದೇವಸ್ಥಾನದ ಬಳಿ ಇದ್ದರು. ಗಲಾಟೆಯಾದ ಸ್ಥಳದಲ್ಲಿ ಅಂಗಡಿಗಳು ಇವೆ ಎಂದರೆ ನಿಜ. ಅಲ್ಲಿ ಅನೇಕ ಜನ ಇದ್ದರು ಎಂದರೆ ನಿಜ.

3) ಆದಿನ ಗಲಾಟೆಯಾದ ಸಮಯ ಕತ್ತಲಾಗಿದ್ದರಿಂದ ಯಾರು ಗಲಾಟೆ ಮಾಡಿ, ಹಲ್ಲೆ ಮಾಡಿದ್ದರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಲೈಟ್ ನ ಬೆಳಕು ಇತ್ತು. ಆದಿನ ಲೈಟ್ ನ ಬೆಳಕು ಇತ್ತು ಎಂದು ಇದೇ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ನಿಜ. ಆದಿನ ನನ್ನ ಮೂಗಿನಲ್ಲಿ ಹಲ್ಲೆಯಿಂದ ರಕ್ತ ಬಂದಿತ್ತು.

ಅದು ಬಟ್ಟೆಗಳಿಗೂ ಸಹ ತಾಗಿತ್ತು, ಬಟ್ಟೆಗಳು ಹರಿದಿತ್ತು. ಗಲಾಟೆಯಾದ ಜಾಗೆ ಮಣ್ಣು ಗದ್ದೆಯ ಜಾಗೆ. ಆ ಮಣ್ಣು ನನ್ನ ಬಟ್ಟೆಗಳಿಗೂ ತಾಗಿತ್ತು. ಪೊಲೀಸರು ಆ ದಿನ ತೊಟ್ಟಿದ್ದ ನನ್ನ ಬಟ್ಟೆಗಳನ್ನು ಪಡೆದಿಲ್ಲ. ನಾನು ಘಟನೆಯ ಬಗ್ಗೆ ಹೇಳುವಾಗ ಇತರ 6 ಜನ ಎಂದು ಹೇಳಿದ್ದೇನೆ. ಅವರ ಹೆಸರುಗಳು ಕೆಲವರದ್ದು ಗೊತ್ತು.

4) ಆರೋಪಿತರನ್ನು ಬಿಟ್ಟು ಬೇರೆ 6 ಜನ ಇರುವುದಾಗಿ ನಾನು ದೂರಿನಲ್ಲಿ ಹೇಳಿಲ್ಲ. ದೂರಿನಲ್ಲಿ ನಾನು ಬಲಕಣ್ಣಿಗೆ ಪೆಟ್ಟಾಗಿರುವುದಾಗಿ ಹೇಳಿದ್ದೇನೆ ಎಂದರೆ ಇರಬಹುದು. ನನ್ನ ಬಲ ಕಣ್ಣಿಗೆ ಪೆಟ್ಟಾಗಿತ್ತು ಎಂದರೆ ನಿಜ. ನನ್ನ ಎಡಕಣ್ಣಿಗೆ ಪೆಟ್ಟಾಗಿದೆ ಎಂದು ನಾನು ಪೊಲೀಸರಿಗೆ ಹೇಳಿಲ್ಲ ಎಂದರೆ ನಿಜ. ಆರೋಪಿತರ ಬಗ್ಗೆ ನನಗೆ ತಾರೀಕು 21-05-2022 ರಂದು ಡಿ.ವೈ.ಎಸ್‌ಪಿ ಕಚೇರಿಯಲ್ಲಿ ಪೊಲೀಸರು ಹೇಳಿದ್ದರಿಂದ ಗೊತ್ತು ಎಂದರೆ ನಿಜ. ಅದಕ್ಕೂ ಮೊದಲು ಆರೋಪಿತರಿಗೂ, ನನಗೂ ಎಲ್ಲಿಯೂ ಪರಿಚಯ ಇಲ್ಲ ಎಂದರೆ ನಿಜ. ಆರೋಪಿತರಿಗೆ ನನ್ನ ಹೆಸರು, ವಿಳಾಸದ ಬಗ್ಗೆ ಡಿ.ವೈಎಸ್ಪಿ ಕಚೇರಿಯಲ್ಲಿ ನನ್ನನ್ನು ನೋಡುವವರೆಗೆ ಗೊತ್ತಿಲ್ಲ ಎಂದರೆ, ಇರಬಹುದು.

5) ಆದಿನ ಮನೆಗೆ ಹೋಗಿದ್ದ ರಿಕ್ಷಾ ಯಾರದ್ದು ಎಂದು ಗೊತ್ತಿಲ್ಲ. ಆದಿನ ನಾವು ಮನೆಗೆ ಹೋದಾಗ ಸುಮಾರು 2.00 ಗಂಟೆಯ ಸಮಯ. ಗಲಾಟೆಯಾದಾಗ ದೇವಸ್ಥಾನದ ಕಮಿಟಿಯವರೊಂದಿಗೆ ಪೊಲೀಸರು ಸಹ ಅಲ್ಲಿಗೆ ಬಂದಿದ್ದರು ಎಂದರೆ ನಿಜ. ಘಟನೆಯ ಬಗ್ಗೆ ಪೊಲೀಸರಿಗೆ ಅಲ್ಲಿಯೇ ಎಲ್ಲವನ್ನು ಹೇಳಿದ್ದೆ. ಅಲ್ಲಿ ಪೊಲೀಸರು ಏನು ಬರವಣಿಗೆ ಮಾಡಿಕೊಂಡಿಲ್ಲ. ಅಜ್ಜರಕಾಡು ಆಸ್ಪತ್ರೆಗೆ ಬಂದಾಗ 2.45 ರ ಸಮಯ. ಬ್ರಹ್ಮಾವರದಲ್ಲಿ ಸರಕಾರಿ ಆಸ್ಪತ್ರೆ ಇದೆ. ಬ್ರಹ್ಮಾವರದಲ್ಲಿ ಪೊಲೀಸ್ ಠಾಣೆ ಇದೆ. ಆದಿನ ಆಸ್ಪತ್ರೆಗೆ ಹೋಗಲು ನನ್ನೊಂದಿಗೆ ಚಾಸಾ-2 ಮತ್ತು 3 ಸಹ ಬಂದಿದ್ದರು. ಘಟನೆಯ ಬಗ್ಗೆ ವೈದ್ಯರಿಗೆ ಚಾಸಾ-3 ಹೇಳಿದ್ದ. ಕಣ್ಣಿಗೆ ಉಪಚಾರಕ್ಕಾಗಿ ಕೇವಲ ಡ್ರಾಪ್ಸ್‌ಗಳನ್ನು ಹಾಕಿ ಬಿಟ್ಟದ್ದರು ಎಂದರೆ, ನನಗೆ ಆಗ ಬ್ಯಾಂಡೇಜ್ ಸಹ ಹಾಕಿದ್ದರು. ಆದಿನ ನನಗೆ ಮಾತನಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದಿನ ನನಗೆ ಔಷಧ ಉಪಚಾರ ಮಾಡಿದ್ದರಿಂದ ನನಗೆ ನಿದ್ರೆಯ ಮಂಪರು ಇತ್ತು.

6) ಆಸ್ಪತ್ರೆಗೆ ಪೊಲೀಸರು ಬಂದಿದ್ದರು ಎಂದು ಚಾಸಾ-3 ಹೇಳಿದ್ದರಿಂದ ಗೊತ್ತು. ಚಾಸಾ-3, ನನಗೆ ಆಗಿದ್ದುದರ ಬಗ್ಗೆ ದೂರು ಬರೆದು ಕೊಟ್ಟಿರುವುದಾಗಿ ಹೇಳಿದ್ದ ಎಂದರೆ ಸರಿಯಲ್ಲ. ಚಾಸಾ-3, ಡಿ.ಎಸ್.ಎಸ್ ಸಂಘದ ಕಾರ್ಯದರ್ಶಿ. ಆತ ಪೊಲೀಸರೊಂದಿಗೆ ಮೀಟಿಂಗ್ ಗೆ ಹೋಗಿರುತ್ತಾರೆ ಎಂದರೆ, ಪೊಲೀಸರ ಪರಿಚಯ ಇದೆ. ಚಾಸಾ-3, ಕಾರ್ಯದರ್ಶಿಯಾಗಿದ್ದರಿಂದ ಅವರಿಗೆ ದೂರು ಕೊಡುವ ಬಗ್ಗೆ ಗೊತ್ತು ಎಂದರೆ, ಅವರು ಕಾರ್ಯದರ್ಶಿ. ಚಾಸಾ-3, ದೂರನ್ನು ಅವರೇ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಅವರು ನಾನು ಹೇಳಿದಂತೆ ಬರೆದುಕೊಟ್ಟಿದ್ದಾರೆ. ಚಾಸಾ-3, ಅವರೇ ಸ್ವತಃ ನಿಪಿ-1 ರ ದೂರನ್ನು ಬರೆದುಕೊಟ್ಟಿದ್ದು, ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಡಾಕ್ಟರ್ ಸಹಿ ಇರಬಹುದು.

7) ಚಾಸಾ-2 ಮತ್ತು 4 ನೇ ಆರೋಪಿಯ ನಡುವೆ ಜಾಗದ ವಿಚಾರವಾಗಿ ತಕರಾರು ಇತ್ತು. ಆರೋಪಿತರೆಲ್ಲರೂ ಸ್ನೇಹಿತರು ಎಂದರೆ ನಿಜ. ಚಾಸಾ-2 ಈತನಿಗೆ ಆರೋಪಿತರ ಮೇಲೆ ದ್ವೇಷ ಇತ್ತು ಎಂದರೆ ಗೊತ್ತಿಲ್ಲ. ಚಾಸಾ-2, ಆರೋಪಿತರ ಮೇಲೆ ಇರುವ ದ್ವೇಷಕ್ಕಾಗಿ ನನ್ನ ಮೂಲಕ ದೂರು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಗಲಾಟೆಯಾದ ಸಂದರ್ಭದಲ್ಲಿ ಚಾಸಾ-2 ಮತ್ತು 3 ಇವರಿಗೆ ಎಲ್ಲಿ ಪೆಟ್ಟಾಗಿತ್ತು ಎಂದರೆ, ಅವರಿಗೆ ಸಣ್ಣ ಪುಟ್ಟ ಪೆಟ್ಟಾಗಿತ್ತು. ಅವರು ಆಸ್ಪತ್ರೆಯಲ್ಲಿ ಇದ್ದರು, ಚಿಕಿತ್ಸೆ ಪಡೆದ ಬಗ್ಗೆ ಗೊತ್ತಿಲ್ಲ.

8) ಆರೋಪಿತರು ನಾನು ಹೇಳಿದಂತೆ ತಾರೀಕು 14-05-2022 ರಂದು ರಾತ್ರಿ ಜಾತ್ರೆಯಲ್ಲಿ ನನ್ನೊಂದಿಗೆ ಯಾವುದೇ ತಂಟೆ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಅವಾಚ್ಯವಾಗಿ ಜಾತಿ ನಿಂದನೆ ಮಾಡಿ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹಲ್ಲೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನಿಂದ ನಿಪಿ-1 ನ್ನು ಪಡೆಯುವುದನ್ನು ಬಿಟ್ಟು ನನ್ನನ್ನು ಬೇರೆ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ

ಸರಿಯಲ್ಲ. ಆರೋಪಿತರ ಮೇಲೆ ನನಗೆ ದ್ವೇಷ ಇದ್ದುದರಿಂದ ಚಾಸಾ-2 ಇವರೊಂದಿಗೆ ಸೇರಿ ಕೊಟ್ಟ ದೂರಿಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ /ವಿಶೇಷ ನ್ಯಾಯಾಧೀಶರು,
ಉಡುಪಿ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅವಕಾಶ ಕೋರಿದ್ದು ಸರಕಾರಿ ಅಭಿಯೋಜಕರಿಗೆ ಪಾಟೀಸವಾಲಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**